ಕಪಿಲಾನದಿಯಿಂದ ಟಿ. ನರಸೀಪುರಕ್ಕೆ ನೀರು ಒದಗಿಸುವ ಯೋಜನೆ

773(778) ಶ್ರೀಮತಿ ಡಾ।। ಭಾರತಿ ಶಂಕರ್ ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಟಿ. ನರಸೀಪುರಕ್ಕೆ ಕಪಿಲಾ ನದಿಯಿಂದ ಕುಡಿಯುವ ನೀರನ್ನು ಒದಗಿಸುವ ಯೋಜನೆಯು ಯಾವ ಹಂತದಲ್ಲಿದೆ?

ಆ) ಗುತ್ತಿಗೆದಾರರು ಎಷ್ಟು ಕಾಲಾವಕಾಶದಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ಒಪ್ಪಂದ ಮಾಡಿಕೊಂಡಿದ್ದಾರೆ.

ಇ) ಯೋಜನೆಯು ವಿಳಂಬವಾಗಲು ಕಾರಣವೇನು?

ಈ) ಯೋಜನೆಯು ಪೂರ್ಣವಾಗಿ ಜನರಿಗೆ ನೀರು ಯಾವಾಗ ದೊರಕುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

ಅ) ಈ ಯೋಜನೆಯ ಬಹುತೇಕ ಕಾಮಗಾರಿಗಳನ್ನು ಪ್ಯಾಕೇಜ್ ಟೆಂಡರ್ ಮೂಲಕ ನೀಡಲಾಗಿದ್ದು ಶೇ.50 ರಷ್ಟು ಕೆಲಸ ಮುಗಿದಿರುತ್ತದೆ.

ಆ) ಗುತ್ತಿಗೆದಾರರು ಕಾಮಗಾರಿಯನ್ನು ಮುಕ್ತಾಯಗೊಳಿಸಲು ನಿವೇಶನವನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸಿದ ದಿನಾಂಕದಿಂದ 18 ತಿಂಗಳುಗಳ ಕಾಲಾವಕಾಶಕ್ಕೆ ಒಪ್ಪಂದ ಮಾಡಿಕೊಂಡಿರುತ್ತಾರೆ.

ಇ) ಈ ಯೋಜನೆಯ ಮೂಲಸ್ಥಾವರಕ್ಕೆ ಬೇಕಾದ ನಿವೇಶನವು ಕಂದಾಯ ಇಲಾಖೆಯಿಂದ ಸೆಪ್ಟೆಂಬರ್ 24 2002ರಂದು ಮಂಡಲಿಗೆ ಹಸ್ತಾಂತರಿಸಲಾಗಿದೆ. ಮೂಲಸ್ಥಾವರದ ನಿವೇಶನದ ಮೇಲ್ಭಾಗದಲ್ಲಿ ಒಂದು ನಾಲೆಯು ಹರಿಯುತ್ತಿದ್ದು, ಅಂತರ್ಜಲದ ಮಟ್ಟವು ಭೂಮಿಯ ಮೇಲ್ಪದರದಲ್ಲೇ ಇರುವ ಕಾರಣ ಹಾಗೂ ಕಬಿನಿ ಜಲಾಶಯದಿಂದ ಆಗಿಂದ್ದಾಗೆ ನೀರು ಬಿಡುತ್ತಿದ್ದ ಕಾರಣ ಇಲ್ಲಿಯವರೆಗೆ ಮೂಲಸ್ಥಾವರದ ಕಾಮಗಾರಿಯನ್ನು ಕೈಗೊಳ್ಳಲಾಗಿರಲಿಲ್ಲ. ಈಗ ಹಾಲಿ ಬೇಸಿಗೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಟಿ. ನರಸೀಪುರ ಪಟ್ಟಣ ಪಂಚಾಯ್ತಿಯವರು, ಯೋಜನೆಯಡಿ ಪ್ರಸ್ತಾಪಿಸಲಾದ ಪಿ.ವಿ.ಸಿ. ಕೊಳವೆ ಮಾರ್ಗವು ಹೆದ್ದಾರಿಗಳಲ್ಲಿದ್ದು ವಾಹನಗಳ ಸಂಚಾರ ಬಹಳವಿರುವುದರಿಂದ ಪಿ.ವಿ.ಸಿ. ಬದಲು ಡಿ.ಐ ಕೊಳವೆಗಳನ್ನು ಹಾಕಲು ಕೋರಿಕೊಂಡ ಮೇರೆಗೆ ಪಿ.ವಿ.ಸಿ. ಕೊಳವೆ ಮಾರ್ಗದ ಬದಲು ಡಿ.ಐ. ಕೊಳವೆ ಮಾರ್ಗದ ಕಾಮಗಾರಿಯನ್ನು ಸಧ್ಯದಲ್ಲೇ ಪ್ರಾರಂಭಿಸಲಾಗುವುದು.

ಈ) ಈ ಯೋಜನೆಯನ್ನು ಮಾರ್ಚ್ 2004ರ ವೇಳೆಗೆ ಮುಕ್ತಾಯಗೊಳಿಸಿ, ಜನರಿಗೆ ನೀರು ಒದಗಿಸಲು ಯೋಜಿಸಲಾಗಿದೆ.

ನಾಗಮಂಗಲ ತಾಲ್ಲೂಕಿನಲ್ಲಿರುವ ಸರ್ಕಾರಿ ನೌಕರರ ವರ್ಗಾವಣೆ

774(811) ಶ್ರೀ ಚಲುವರಾಯ ಸ್ವಾಮಿ ಎನ್ (ನಾಗಮಂಗಲ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿರುವ ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ಮನಬಂದಂತೆ ವರ್ಗಾವಣೆ ಹಾಗೂ ಬೇರೆ ಕಡೆಗೆ ನಿಯೋಜನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಈ ರೀತಿ ವರ್ಗಾವಣೆಯಿಂದ ತಾಲ್ಲೂಕಿನ ಅಭಿವೃದ್ಧಿ ಕೆಲಸಗಳಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; ಬಂದಿದ್ದರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಸರಿಪಡಿಸಲು ಸರ್ಕಾರದ ಕ್ರಮವೇನು;

ಇ) ರಾಜ್ಯ ವಿವಿಧ ಇಲಾಖೆಯಲ್ಲಿ ನಿಯೋಜನೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಮನಬಂದಂತೆ ಕಾರ್ಯದರ್ಶಿಯವರು ಹಿಂತಿರುಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ) ವರ್ಗಾವಣೆಗಳನ್ನು ಸರ್ಕಾರದ ಮಾರ್ಗಸೂಚನೆಗಳಂತೆ ಮಾಡಲಾಗಿದೆ.

ಆ) ಇಲ್ಲ.

ಉದ್ಭವಿಸುವುದಿಲ್ಲ.

ಇ) ಇಲ್ಲ.

ಉದ್ಭವಿಸುವುದಿಲ್ಲ.

ಶಿವಮೊಗ್ಗ ನಗರ ಸಭೆಯ ಅಭಿವೃದ್ಧಿ ಕಾರ್ಯಗಳು

775(827) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ನಗರ ಸಭೆ ವತಿಯಿಂದ 2001-2002 ಹಾಗೂ 2002-2003ನೇ ಸಾಲಿನವರೆಗೆ ನಡೆದಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಮೊತ್ತವೆಷ್ಟು? ಕಾಮಗಾರಿಗಳ ವಿವರ ನೀಡುವುದು;

ಆ) ಈ ಕಾಮಗಾರಿಗಳಿಗೆ ಸರ್ಕಾರದ ವತಿಯಿಂದ ಹಾಗೂ ವಿವಿಧ ಮೂಲಗಳಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ. ವಿವರ ನೀಡುವುದು;

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ) 2001-2002ನೇ ಸಾಲಿನಲ್ಲಿ ನಡೆದಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಮೊತ್ತ ರೂ. 408.86 ಲಕ್ಷ ಮತ್ತು 2002-2003ನೇ ಸಾಲಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಮೊತ್ತ ರೂ. 558.00 ಲಕ್ಷಗಳಾಗಿರುತ್ತದೆ. ಕಾಮಗಾರಿಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.

ಆ) ಸರ್ಕಾರದ ವತಿಯಿಂದ 2001-2002ನೇ ಸಾಲಿಗೆ ರೂ. 35.45 ಲಕ್ಷ ಮತ್ತು 2002-2003ನೇ ಸಾಲಿಗೆ ರೂ. 41.30 ಲಕ್ಷ ಖರ್ಚು ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿರುತ್ತವೆ:-

	ವಿವರ	2001-02	2002-03
1.	10ನೇ ಹಣಕಾಸು ಯೋಜನೆ	24.30	18.29
2.	ಎಸ್ಎಫ್ಸಿ ಅನುದಾನ	2.96	14.53
3.	ಸಂಸತ್ ಸದಸ್ಯರ ಅನುದಾನ	5.19	2.27
4.	ಸ್ಥಳೀಯ ಶಾಸಕರ ಅನುದಾನ	1.04	2.86
5.	ಜಿಲ್ಲಾಧಿಕಾರಿಗಳ ಕಛೇರಿಯಿಂದ ಕೊಳವೆ ಬಾವಿ ಕೊರೆಸಲು ಬಂದ ಹಣ	1.96	3.35
	ಒಟ್ಟು	35.45	41.30